<u>**3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**</u>

<u>**ಎಸ್.ಸಿ. ಸಂಖ್ಯೆಃ 79/2013**</u>

ದಿನಾಂಕಃ 30.03.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 5 ಪ್ರಾಸಾ - 4

| | | |
|---|---|---|
| ಹೆಸರು | ಃ | ಮಂಜುನಾಥ |
| ತಂದೆಯ/ಗಂಡನ ಹೆಸರು | ಃ | ಕೃಷ್ಣಪ್ಪ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಕೊಳವೆ ಬಾವಿ ಮೆಕ್ಯಾನಿಕ್ |
| ವಾಸಸ್ಥಳ | ಃ | ಗಿಡ್ಡೇನಹಳ್ಳಿ |

<u>**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**</u>

ಪ್ರಾಸಾ 1 ನನ್ನ ಅತ್ತಿಗೆ. ಪ್ರಾಸಾ 2 ಮತ್ತು 3 ನನ್ನ ತಾಯಿ ತಂದೆ. ನನ್ನ ತಂದೆತಾಯಿಗೆ ನಾವು ಒಟ್ಟಾರೆ 5 ಜನ ಮಕ್ಕಳು. ಅವರುಗಳ ಪೈಕಿ 3 ಜನ ಗಂಡು ಮಕ್ಕಳು ಹಾಗು ಇಬ್ಬರು ಹೆಣ್ಣು ಮಕ್ಕಳು. ಮೃತ ಕಾಂತರಾಜು ನನ್ನ ಅಣ್ಣ.

2. ಆರೋಪಿಗಳು ನನ್ನ ಮೃತ ಅಣ್ಣನ ಸ್ನೇಹಿತರು. ಅವರುಗಳು ಸಹ ಕೊಳವೆ ಬಾವಿ ಕೆಲಸ ನಿರ್ವಹಿಸುತ್ತಿದ್ದರು.

3. ನನ್ನ ಅಣ್ಣ ಕಾಂತರಾಜು ಕೊಲೆಗೀಡಾಗಿ ಸಾವನ್ನಪ್ಪಿರುತ್ತಾರೆ, ಆದರೆ ಸದರಿ ಕೊಲೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ.

4. ದಿನಾಂಕ 06.08.2012 ರಂದು ಸೋಮವಾರ ಬೆಳಿಗ್ಗೆ 9 ರಿಂದ 10 ಗಂಟೆ ಸಮಯದಲ್ಲಿನನ್ನ ಮೃತ ಅಣ್ಣ ಮತ್ತು ಆರೋಪಿಗಳು ದ್ವಿಚಕ್ರ ವಾಹನದಲ್ಲಿ ಕೆಲಸದ ನಿಮಿತ್ತ ನಮ್ಮ ಊರಾದ ಗಿಡ್ಡೇನಹಳ್ಳಿಯಿಂದ

ಹೋಗಿರುತ್ತಾರೆ. ನನ್ನ ಅಣ್ಣ ಕಾಂತರಾಜು ಸದರಿ ದಿನದಿಂದ 3 – 4 ದಿನಗಳ ಕಾಲ ಮನೆಗೆ ಬಾರದಿದ್ದ ಕಾರಣ ನಾವುಗಳು ಮಾದನಾಯಕನಹಳ್ಳಿ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಹೋಗಿದ್ದೆವು. ಸದರಿ ಮಾದನಾಯಕನಹಳ್ಳಿ ಪೊಲೀಸರು ಮತ್ತೆರಡು ದಿನ ತಡೆದು ದೂರನ್ನು ದಾಖಲಿಸಿಕೊಳ್ಳುವುದಾಗಿ ನುಡಿದರು.

5. ಆದರೆ 3-4 ದಿನಗಳ ಬಳಿಕ ತಾವರೆಕೆರೆ ಪೊಲೀಸರು ನನ್ನ ಅಣ್ಣ ಕಾಂತರಾಜುನನ್ನು ಬೂತಬಂಗಲೆ ಕೆರೆ ಸಮೀಪ ಕೊಲೆಗೆ ಒಳಪಟ್ಟಿರುವುದಾಗಿ ತಿಳಿಸಿರುತ್ತಾರೆ. ಆರೋಪಿಗಳೆಲ್ಲರೂ ಅಂದರೆ ನ್ಯಾಯಾಲಯದ ಮುಂದಿರುವ ಇಬ್ಬರು ಆರೋಪಿಗಳು ಹಾಗು ತಲೆಮರೆಸಿಕೊಂಡಿರುವ ಆರೋಪಿ ನನ್ನ ಅಣ್ಣ ಕಾಂತರಾಜು ಉಪಯೋಗಿಸಿತ್ತಿದ್ದ ದ್ವಿಚಕ್ರ ವಾಹನವನ್ನು ಅಡಮಾನ ಮಾಡಿ ಸದರಿ ವಾಹನವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಅಣ್ಣ ಉಪಯೋಗಿಸುತ್ತಿದ್ದ ಮೊಬೈಲ್ ಸಿಮ್‌ನ್ನು ಸಹ ಸದರಿ ಆರೋಪಿಗಳು ಅಕ್ರಮವಾಗಿ ಉಪಯೋಗಿಸಿಕೊಂಡಿರುತ್ತಾರೆ.

6. ಬೂತಬಂಗಲೆ ಸಮೀಪ ಮೀನು ಹಿಡಿಯಲು ಎಂದು ಹೋಗಿ ನನ್ನ ಅಣ್ಣನನ್ನು ಕೊಲೆ ಮಾಡಿರುತ್ತಾರೆ ಎಂದು ಪೊಲೀಸರು ನಮಗೆ ತಿಳಿಸಿರುತ್ತಾರೆ. ನಾನು ಈ ಮೇಲಿನ ಸಂಗತಿಗಳು ಕುರಿತಂತೆ ಪೊಲೀಸರಿಗೆ ಲಿಖಿತ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ.ಕೆ.ಎನ್.ಜಿ. ವಕೀಲರಿಂದ - ಆರೋಪಿಗಳ ಪರವಾಗಿಃ ಆರೋಪಿಗಳ ಪರವಾಗಿ ಕೆ.ಎನ್.ಜಿ. ವಕೀಲರು ಎಲ್ಲಾ ಸಾಕ್ಷಿಗಳ ಪಾಟೀಸವಾಲನ್ನು ಒಟ್ಟಾರೆ ಮಾಡುತ್ತೇನೆ ಎಂದು ನುಡಿದಿದ್ದು, ಯಾವುದೇ ಸಮರ್ಪಕ ಕಾರಣಗಳು ಇಲ್ಲದೇ ಇರುವುದರಿಂದ ಮಾನ್ಯ ವಕೀಲರ**

**<u>ಕೋರಿಕೆಯನ್ನು ತಿರಸ್ಕರಿಸಿ, ಪಾಟೀಸವಾಲು ಇಲ್ಲ ಎಂದು ಪರಿಗಣಿಸಿ ಸಾಕ್ಷಿಯನ್ನು ವಿಚಾರಣೆಯಿಂದ ಕೈಬಿಡಲಾಗಿದೆ.</u>**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.